**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಇಸ್ರೇಲ್ ತಂತ್ರಜ್ಞಾನ ಆಧಾರಿತ ಅಳವಡಿಸಲು ಕೃಷಿ ಇಲಾಖೆಯ ಅಧೀನದಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಸಮಗ್ರ ಬೇಸಾಯ ಅಭಿಯಾನ ಮಿಶನ್ ನಿರ್ದೇಶನಾಲಯವನ್ನು ಸೃಜಿಸುವ /ಸ್ಥಾಪಿಸುವ ಬಗ್ಗೆ.

**ಓದಲಾಗಿದೆ :** ಸರ್ಕಾರಿ ಆದೇಶ ಸಂಖ್ಯೆ:ತೋಇ 109 ತೋಯೋಕ 2018, ದಿ:27.12.2018.

****

**ಪ್ರಸ್ತಾವನೆ:**

ದಿನಾಂಕ:05.07.2018ರಂದು ಮಂಡಿಸಲಾದ 2018-19ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-17 ಮತ್ತು 30ರಲ್ಲಿ ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ರಾಜ್ಯದಲ್ಲಿ ಅಳವಡಿಸಲು ಮತ್ತು ಈ ಕುರಿತು ಒಣ ಬೇಸಾಯ ಹೊಂದಿರುವ ಕೋಲಾರ, ಚಿತ್ರದುರ್ಗ, ಕೊಪ್ಪಳ ಮತ್ತು ಗದಗ ಜಿಲ್ಲೆಗಳಲ್ಲಿ ಮೊದಲ ಹಂತದಲ್ಲಿ ತಲಾ 5000 ಹೆಕ್ಟರ್ ಖುಷ್ಕಿ ಜಮೀನಿನಲ್ಲಿ ಮತ್ತು ಕಾರವಾರ, ತುಮಕೂರು ಯಾದಗಿರಿ ಮತ್ತು ಹಾವೇರಿ ಜಿಲ್ಲೆಗಳಲ್ಲಿ ತಲಾ 5000 ಹೆಕ್ಟರ್ ಪ್ರದೇಶದಲ್ಲಿ ಇಸ್ರೇಲ್ ಮಾದರಿ ನೀರಾವರಿ ಪದ್ಧತಿಯನ್ನು ಅಳವಡಿಸಲು ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಪ್ರತ್ಯೇಕವಾಗಿ ತಲಾ ರೂ. 150.00 ಕೋಟಿಗಳಂತೆ ಒಟ್ಟು 300.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

ಸದರಿ ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ರಾಜ್ಯದಲ್ಲಿ ಅಳವಡಿಸುವ ಕುರಿತು ಅಧ್ಯಯನ ಮಾಡಿ ವರದಿ ಸಲ್ಲಿಸುವಂತೆ ಶ್ರೀ ಮನೋಜ ರಾಜ್, ಐಎಫ್ಎಸ್ ಅಧಿಕಾರಿ, ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಇಸ್ರೇಲ್ ಮಾದರಿ ಕೃಷಿ ಪದ್ಧತಿ ಅಳವಡಿಸುವ ಕುರಿತು ಸಮಗ್ರ ಅಧ್ಯಯನ ನಡೆಸಿ ಸಲ್ಲಿಸಿರುವ ವರದಿಯನ್ವಯ ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯದೊಂದಿಗೆ ಸಚಿವ ಸಂಪುಟದ ಅನುಮೋದನೆ ಪಡೆದು ಯೋಜನೆಯ ಅನುಷ್ಠಾನಕ್ಕೆ ಮೇಲೆ ಓದಲಾದ ಆದೇಶದನ್ವಯ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶದಲ್ಲಿ ಪ್ರಸ್ತಾಪಿತ ಇಸ್ರೇಲ್ ತಂತ್ರಜ್ಞಾನ ಕೃಷಿ ಪದ್ಧತಿಯನ್ನು ರಾಜ್ಯದಲ್ಲಿ ಜಾರಿಗೊಳಿಸಲು ಒಂದು ಪ್ರತ್ಯೇಕ ಮಿಷನ್ ನಿರ್ದೇಶನಾಲಯವನ್ನು ಸೃಜಿಸಲು ಪ್ರಸ್ತಾಪಿಸಲಾಗಿದೆ. ಅದರಂತೆ ಒಂದು ಪ್ರತ್ಯೇಕ ಮಿಶನ್ ನಿರ್ದೇಶನಾಲಯವನ್ನು ಸೃಜಿಸಲು ಪ್ರಸ್ತಾಪಿಸಲಾಗಿತ್ತು.

ಪ್ರಸ್ತಾಪಿತ ಮಿಶನ್ ನಿರ್ದೇಶನಾಲಯದ ಸೃಜನೆಗೆ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 24 ವೆಚ್ಚ-4/2019, ದಿ:25.02.2019ರಲ್ಲಿ ಸಹಮತಿ ನೀಡಿದೆ. ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಕೃಇ 01 ಕೃಕೈಲು 2019, ಬೆಂಗಳೂರು ದಿನಾಂಕ:27.02.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಇಸ್ರೇಲ್ ತಂತ್ರಜ್ಞಾನ ಅಧಾರಿತ ಕೃಷಿ ಪದ್ಧತಿಯನ್ನು ರಾಜ್ಯದಲ್ಲಿ ಅಳವಡಿಸುವ ಹೊಸ ಯೋಜನೆಯನ್ನು ಜಾರಿಗೊಳಿಸಲು ಒಬ್ಬ ಅಖಿಲ ಭಾರತ ಸೇವೆಗೆ ಸೇರಿದ

ಅಧಿಕಾರಿಯ ನೇತೃತ್ವದಲ್ಲಿ ಕೃಷಿ ಇಲಾಖೆಯ ಕಾರ್ಯದರ್ಶಿಯವರ ಅಧೀನದಲ್ಲಿ ಈ ಕೆಳಕಂಡಂತೆ ಮಿಶನ್ ನಿರ್ದೇಶನಾಲಯವನ್ನು ಸೃಜಿಸಲಾಗಿದೆ.

| ಕ್ರ.ಸಂ. | ಹುದ್ದೆಯ ಹೆಸರು | ಆರ್ಥಿಕ ಇಲಾಖೆಯು ಸಹಮತಿಸಿದ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1. | ಮಿಷನ್ ನಿರ್ದೇಶಕರು | 01 | ಅಖಿಲ ಭಾರತ ಸೇವೆ (AIS) ವೃಂದದಿಂದ ನಿಯೋಜನೆ |
| 2. | ಹೆಚ್ಚುವರಿ ಮಿಷನ್ ನಿರ್ದೇಶಕರು | 02 | (01 ಹುದ್ದೆಯನ್ನು ಕೃಷಿ /ತೋಟಗಾರಿಕೆ ಇಲಾಖೆಯ ಹೆಚ್ಚುವರಿ ನಿರ್ದೇಶಕರ ವೃಂದದಿಂದ ಮತ್ತು ಇನ್ನೊಂದು ಹುದ್ದೆಯನ್ನು ಸಣ್ಣ ನೀರಾವರಿ / ಜಲ ಸಂಪನ್ಮೂಲ ಇಲಾಖೆಯ ಮುಖ್ಯ ಇಂಜಿನಿಯರ್ ವೃಂದದಿಂದ |
| 3. | ವಾಹನ ಚಾಲಕರು | 03 | ಹೊರಗುತ್ತಿಗೆ ಆಧಾರದ ಮೇಲೆ |
| 4. | ಗ್ರೂಪ್-ಡಿ | 03 | |
| 5. | ಶೀಘ್ರಲಿಪಿಗಾರರು/ಬೆರಳಚ್ಚುಗಾರರು/ ಡಾಟಾಎಂಟ್ರಿ ಆಪರೇಟರ್ | 03 | |
| 6. | ಟೆಕ್ನಿಕಲ್ ಅಸಿಸ್ಟಂಟ್ | 03 | Re-deployment ಮೂಲಕ |
| 7. | ಸಹಾಯಕ/ ಕಿರಿಯ ಸಹಾಯಕ | 03 | ಸಚಿವಾಲಯ/ಸಂಬಂಧಪಟ್ಟ ಇಲಾಖೆಗಳಿಂದ ನಿಯೋಜನೆ ಮೂಲಕ |
| 8. | ಪತ್ರಾಂಕಿತ ಆಪ್ತ ಸಹಾಯಕ/ ಆಪ್ತ ಸಹಾಯಕ(ಮಿಷನ್ ನಿರ್ದೇಶಕರ ಕಛೇರಿಗೆ) | 01 | |
| ಒಟ್ಟು | | 19 | |

ಮೇಲ್ಕಂಡ ಹುದ್ದೆಗಳ ಪೈಕಿ ಹೆಚ್ಚುವರಿ ಮಿಷನ್ ನಿರ್ದೇಶಕರುಗಳ ಹುದ್ದೆಯನ್ನು ಮತ್ತು ತಾಂತ್ರಿಕ ಅಧಿಕಾರಿಗಳ ಹುದ್ದೆಗಳನ್ನು ಸೃಜಿಸುವ ಬದಲಾಗಿ ಆಯಾ ಇಲಾಖೆಗಳಲ್ಲಿ ಅಸ್ತಿತ್ವದಲ್ಲಿರುವ ಹುದ್ದೆಗಳಿಂದ Re-deployment ಮೂಲಕ ಭರ್ತಿ ಮಾಡಿಕೊಳ್ಳತಕ್ಕದ್ದು. ನಿಯೋಜನೆ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ಸಿಆಸುಇ, ಕರ್ನಾಟಕ ಸರ್ಕಾರದ ಸಚಿವಾಲಯ ಮತ್ತು ಸಂಬಂಧಪಟ್ಟ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸುವ ಮೂಲಕ ಅಥವಾ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡುವಾಗ ಅಗತ್ಯ ನಿಯಮಗಳನ್ನು ಪಾಲನೆ ಮಾಡತಕ್ಕದ್ದು.

ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ಜಾರಿಗೊಳಿಸಲು ಹೊಸದಾಗಿ ಸೃಜನೆಯಾಗಿರುವ ಮಿಷನ್ ನಿರ್ದೇಶನಾಲಯಕ್ಕೆ ಸಂಬಂಧಿಸಿದ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತಿವೆ.

1. ಈ ಮಿಷನ್ ನಿರ್ದೇಶನಾಲಯವು ಒಬ್ಬ ಅಖಿಲ ಭಾರತ ಸೇವೆಗೆ ಸೇರಿದ ಅಧಿಕಾರಿಯ ನೇತೃತ್ವದಲ್ಲಿ ಕೃಷಿ ಇಲಾಖೆಯ ಕಾರ್ಯದರ್ಶಿಯವರ ಅಧೀನದಲ್ಲಿ ಕಾರ್ಯನಿರ್ವಹಿಸತಕ್ಕದ್ದು.
2. ಮಿಷನ್ ನಿರ್ದೇಶನಾಲಯದ ನೇತೃತ್ವದಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಯ ಗಮನೀಕೃತ ಅನುಷ್ಠಾನವನ್ನು ಕೈಗೊಳ್ಳಲು ಕೃಷಿ, ತೋಟಗಾರಿಕೆ, ಜಲಸಂಪನ್ಮೂಲ ಮತ್ತು ಸಣ್ಣ ನೀರಾವರಿ ಇಲಾಖೆಗಳ ಅಂತರ-ಇಲಾಖಾ ಸಮನ್ವಯ ಅತ್ಯಾವಶ್ಯಕವಾಗಿರುತ್ತದೆ. ಆದ್ದರಿಂದ ನಾಲ್ಕು ಇಲಾಖೆಗಳು ಈ ಮಿಷನ್ ನಿರ್ದೇಶನಾಲಯಕ್ಕೆ ಪೂರ್ಣ ಸಹಕಾರವನ್ನು ನೀಡತಕ್ಕದ್ದು.
3. ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ಜಾರಿಗೊಳಿಸಲು ಆಯಾ ಇಲಾಖೆಗಳ ಅಧೀನದಲ್ಲಿ ಒಂದೊಂದು ಪ್ರತ್ಯೇಕ ಕೋಶಗಳನ್ನು ಅಂದರೆ ಕೃಷಿ ಇಲಾಖೆಯಲ್ಲಿ ಇಸ್ರೇಲ್ ಆಧಾರಿತ ಕೃಷಿ ಕೋಶ (Israel Based Agricultural Cell), ತೋಟಗಾರಿಕೆ ಇಲಾಖೆಯ ಅಧೀನದಲ್ಲಿ ಇಸ್ರೇಲ್ ಆಧಾರಿತ ತೋಟಗಾರಿಕೆ ಕೋಶ (Israel Based Horticultural Cell) ಮತ್ತು ಜಲಸಂಪನ್ಮೂಲ ಇಲಾಖೆಯ ಅಧೀನದಲ್ಲಿ ಕಿರು ನೀರಾವರಿ ಕೋಶ (Minor Irrigation Cell) ಎಂಬ ತಾಂತ್ರಿಕ ಕೋಶಗಳನ್ನು ರಚಿಸಕ್ಕದ್ದು.
4. ಇಸ್ರೇಲ್ ಮಾದರಿಯ ಕೃಷಿ ಪದ್ಧತಿಯನ್ನು ಅಳವಡಿಸಲು ಸೃಜಿಸಿರುವ ಮಿಷನ್ ನಿರ್ದೇಶನಾಲಯವು ಸಂದರ್ಭಾನುಸಾರ ಆಯಾ ಇಲಾಖೆಗಳ ಜಿಲ್ಲಾ/ತಾಲ್ಲೂಕು/ಹೋಬಳಿ ಮಟ್ಟದ ಅಧಿಕಾರಿ/ನೌಕರರ ಸೇವೆಯನ್ನು ಬಳಸಿಕೊಳ್ಳತಕ್ಕದ್ದು. ಅದೇ ರೀತಿ ಎಲ್ಲ ಇಲಾಖೆಗಳ ಅಧಿಕಾರಿ/ನೌಕರರು ಮಿಷನ್ ನಿರ್ದೇಶನಾಲಯವು ಸೂಚಿಸುವ ಕರ್ತವ್ಯಗಳನ್ನು ಚಾಚೂ ತಪ್ಪದೇ ನಿರ್ವಹಿಸತಕ್ಕದ್ದು.

ಈ ಮಿಷನ್ ನಿರ್ದೇಶನಾಲಯವು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 24 ವೆಚ್ಚ-4/2019, ದಿನಾಂಕ:25.02.2019ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ).

27/2

ಪ್ರತಿ:

1. ಪ್ರಧಾನ ಮಹಾಲೇಖಪಾಲರು( ಎ&ಇ)/(ಜಿ &ಎಸ್.ಎಸ್.ಎ)/(ಇ& ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.

2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ, ಯೋಜನೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ/ತೋಟಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ, ವಿಕಾಸಸೌಧ, ಬೆಂಗಳೂರು.
10. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
11. ಸರ್ಕಾರದ ವಿಶೇಷ ಕಾರ್ಯದರ್ಶಿ, ಆಹಾರ ಸಂಸ್ಕರಣಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ನಿರ್ದೇಶಕರು, ತೋಟಗಾರಿಕೆ/ ಕೃಷಿ ಇಲಾಖೆ, ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ, ಬೆಂಗಳೂರು.
14. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
15. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-4, ವಿಧಾನಸೌಧ, ಬೆಂಗಳೂರು.
16. ಸರ್ಕಾರದ ಜಂಟಿ ಕಾರ್ಯದರ್ಶಿ, ಪದನಿಮಿತ್ತ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
17. ಮಾನ್ಯ ಕೃಷಿ ಸಚಿವರ/ತೋಟಗಾರಿಕೆ ಸಚಿವರ/ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು,
18. ಸಮಾಲೋಚಕರು, ಇ-ಆಡಳಿತ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.
19. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

*****

ಸರ್ಕಾರದ ಆದೇಶ ಸಂಖ್ಯೆ:ಕೃಇ 01 ಕೃಕೈಲ 2019, ಬೆಂಗಳೂರು ದಿನಾಂಕ:27.02.2019 ರ ಅನುಬಂಧ

ಇಸ್ರೇಲ್ ಮಾದರಿ ಕೃಷಿ ಪದ್ಧತಿಯನ್ನು ಜಾರಿಗೊಳಿಸಲು ಹೊಸದಾಗಿ ಸೃಜನೆಯಾಗಿರುವ ಮಿಷನ್ ನಿರ್ದೇಶನಾಲಯದ ಕರ್ತವ್ಯ ಮತ್ತು ಜವಾಬ್ದಾರಿಗಳು **(ROLE AND RESPONSIBILITIES OF THE MISSION)** ಈ ಕೆಳಕಂಡಂತಿವೆ.

1. The Mission will take forward the vision of the Budget Statement 2018-19 to implement Israeli based agriculture, horticulture and irrigation systems.
2. It will take up various activities in this direction in close co-ordination with all the departments concerned.
3. It will implement various interventions recommended by the Empowered Committee.
4. It will be responsible for budgeting and creation of necessary infrastructure for capacity building and extension activities.
5. It will coordinate with multiple departments, ensure timely implementation, periodic monitoring of the progress and creating adequate awareness among the farming community.
6. ITBIF Mission along with KAMIC and the special cells will draw up various schemes, action plans and milestones.
7. It will also take up convergence of various Central and State government schemes.
8. ITBIFM to oversee involvement of universities and foreign agencies for capacity building, technology transfer, market linkages and establishment of Centre of excellences and guide the line departments in implementing the schemes.

B S Nagarathnamma

Under Secretary to Government

Agriculture Department (Planning)